ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ4(7) ಪ್ರೌ.ಶಿ ವರ್ಗ: 09/2019-20 ದಿನಾಂಕ:-17/07/2019

ಜ್ಞಾಪನ

**ವಿಷಯ** : 2018-19ನೇ ಸಾಲಿನ ಪ್ರೌಢಶಾಲಾ ಶಿಕ್ಷಕರ ವೃಂದದ ವರ್ಗಾವಣಾ ಗಣಕೀಕೃತ ಕೌನ್ಸಿಲಿಂಗ್ ಪ್ರಕ್ರಿಯೆಗಳನ್ನು ಮುಂದುವರೆಸುವ ಬಗ್ಗೆ ಮಾರ್ಗಸೂಚಿಗಳು – ವೇಳಾಪಟ್ಟಿಯಲ್ಲಿ ಅಲ್ಪ ಬದಲಾವಣೆಗಳ ಮಾಡಿರುವ ಬಗ್ಗೆ.

**ಉಲ್ಲೇಖ : ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ** : 01.06.2019 ಹಾಗೂ ದಿನಾಂಕ 09/07/2019

--

ವಿಷಯದನ್ವಯ ವರ್ಗಾವಣೆ / ವಿನಾಯಿತಿ / ಆದ್ಯತಾ ಪ್ರಕರಣಗಳ ಕುರಿತಾಗಿ ಅವಧಿಯೊಳಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯವರು ಮತ್ತು ಆಯಾ ಕ್ಷೇತ್ರಶಿಕ್ಷಣಾಧಿಕಾರಿಯವರು ಸೂಕ್ತವಾಗಿ ಲೋಪವಿಲ್ಲದಂತೆ ವಿಲೇವಾರಿ ಮಾಡಲು ಆಡಳಿತ ಕಾರ್ಯವಿಧಾನವನ್ನು ಸೂಚಿಸಿ ದಿನಾಂಕ 17/07/2019ರಲ್ಲಿ ಜ್ಞಾಪನವನ್ನು ಹೊರಡಿಸಲಾಗಿರುತ್ತದೆ. ಈ ಜ್ಞಾಪನವನ್ನು ಹೊರಡಿಸುವ ಪೂರ್ವದಲ್ಲಿ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ದಿನಾಂಕ 16/06/2019ರಂದು ಚರ್ಚಿಸಲಾಗಿದೆ. ದಿನಾಂಕ 17/07/2019ರ ಜ್ಞಾಪನದಲ್ಲಿ ಆಕ್ಷೇಪಣೆಗಳ ವಿಲೇವಾರಿಗೆ ಆಯಾ ಸಕ್ಷಮ ಪ್ರಾಧಿಕಾರಿಯವರು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಯವರು ಕರಡು ಪಟ್ಟಿಗಳನ್ನು ಶಿಕ್ಷಕರ ಗಮನಕ್ಕೆ ಪ್ರಚುರಪಡಿಸಿ ಕರಡು ಪಟ್ಟಿಗಳ ಬಗ್ಗೆ ಅರ್ಜಿದಾರರ ಮನವಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಯವರು ಖುದ್ದು ಆಲಿಸಿ ಅಂತಿಮ ಪಟ್ಟಿಗಳನ್ನು ಪ್ರಕಟಿಸಲು ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಮಾರ್ಗಸೂಚಿಯಲ್ಲಿನ ವೇಳಾಪಟ್ಟಿಯಲ್ಲಿ ಕೆಳಗಿನಂತೆ ಅಲ್ಪ ಬದಲಾವಣೆಗಳನ್ನು ಮಾಡಲಾಗಿದೆ. ಪರಿಷ್ಕೃತ ವೇಳಾಪಟ್ಟಿಯಂತೆ ಆಯಾ ಪ್ರಾಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ನಿಗದಿತ ದಿನಾಂಕಗಳಂದು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು. ಉಳಿದ ಎಲ್ಲಾ ಮಾರ್ಗಸೂಚಿ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ. ಈ ಬಗ್ಗೆ ವ್ಯಾಪ್ತಿಯ ಎಲ್ಲಾ ಶಿಕ್ಷಕರ ಗಮನಕ್ಕೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು.

| ಕ್ರ.ಸ | ವಿವರ | ದಿನಾಂಕ: | ಕ್ರಮವಹಿಸುವ ಅಧಿಕಾರಿಗಳು |
|---|---|---|---|
| 1 | ಆದ್ಯತಾ ಹಾಗೂ ವಿನಾಯಿತಿ ಪ್ರಕರಣಗಳಲ್ಲಿ ಸ್ವೀಕೃತವಾದ ಎಲ್ಲಾ ಮನವಿ/ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯವರು ಆಯಾ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ ರವಾನಿಸುವುದು | 17/07/2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 2 | ದಿನಾಂಕ 17/07/2019ರ ಜ್ಞಾಪನದಲ್ಲಿ ಸೂಚಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ಸಕ್ಷಮ ಪ್ರಾಧಿಕಾರಿಯವರ ಕಛೇರಿಯಿಂದ ಪಡೆದ ಮತ್ತು ತಮ್ಮ ಕಛೇರಿಯಲ್ಲಿ ಸ್ವೀಕರಿಸಿರಬಹುದಾದ ಎಲ್ಲಾ ಆಕ್ಷೇಪಣಾ ಅರ್ಜಿಗಳನ್ನು ಪರಿಶೀಲಿಸಿ, ದಾಖಲಾತಿಗಳ ಪರಿಶೀಲನೆಯ ಆಧಾರದ ಮೇಲೆ ಎಲ್ಲ ವಿಧದ ವರ್ಗಾವಣೆಗಳ ಸಂಬಂಧ 'ಕರಡು ಅಂಗೀಕೃತ ಪಟ್ಟಿ' ಮತ್ತು 'ಕರಡು ತಿರಸ್ಕೃತ ಪಟ್ಟಿ' ಗಳನ್ನು ಪ್ರಕಟಿಸುವುದು | 20/07/2019 | 1) ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>2) ವಿಭಾಗೀಯ ಸಹ ನಿರ್ದೇಶಕರು |



Scanned by CamScanner

| | | | |
|---|---|---|---|
| 3 | ಮೇಲಿನಂತೆ ಪ್ರಕಟಿಸಿರುವ ಎರಡು ಪಟ್ಟಿಗಳಿಗೆ ಅಂತಿಮವಾಗಿ ಆಕ್ಷೇಪಣೆ / ಅಗತ್ಯ ದಾಖಲೆಗಳನ್ನು ಸಲ್ಲಿಸಲು ಮತ್ತು ಸದರಿ ಆಕ್ಷೇಪಣೆಗಳನ್ನು ಸ್ವೀಕರಿಸಿ ಆಲಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳುವುದು | 23/07/2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 4 | ವಿನಾಯ್ತಿ / ಅದ್ಯತೆ ಕುರಿತಾದ ಆಕ್ಷೇಪಣೆಗಳನ್ನು ಸರಿಪಡಿಸಿ ಎಲ್ಲಾ ವಿಧವಾದ ವರ್ಗಾವಣೆಗಳಿಗೆ ಅಂತಿಮ ಪಟ್ಟಿ ಪ್ರಕಟಿಸುವುದು. | 24.07.2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| | ಕೋರಿಕೆ ವರ್ಗಾವಣೆಗಳು ಮತ್ತು ಪರಸ್ಪರ ವರ್ಗಾವಣೆಗಳ ಮುಂದುವರೆದ ಕ್ರಮಗಳು | | |
| 5 | ಕೋರಿಕೆ ಹಾಗೂ ಪರಸ್ಪರ ವರ್ಗಾವಣೆ ಬಯಸಿರುವ ಶಿಕ್ಷಕರ ತಾತ್ಕಾಲಿಕ ಆದ್ಯತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಧಿ (ಘಟಕದ ಒಳಗೆ ಮತ್ತು ಘಟಕದ ಹೊರಗೆ) | 24.07.2019 | ವಿಭಾಗೀಯ ಸಹನಿರ್ದೇಶಕರು/ ಜಿಲ್ಲಾ ಉಪನಿರ್ದೇಶಕರು[ಆಡಳಿತ] |
| 6 | ಘಟಕದೊಳಗಿನ ಕೋರಿಕೆ ಮತ್ತು ಪರಸ್ಪರ ಆದ್ಯತಾ ಪಟ್ಟಿಗಳಿಗೆ ಸ್ವೀಕರಿಸಿರುವ ಆಕ್ಷೇಪಣೆಗಳನ್ನು ಸರಿಪಡಿಸಲು ಪ್ರಾಧಿಕಾರಿಗಳಿಗೆ ಆನ್‌ಲೈನ್ ನಲ್ಲಿ [ಸಹನಿರ್ದೇಶಕರಿಗೆ] ಸಲ್ಲಿಸುವುದು.<br>ಆಕ್ಷೇಪಣೆಗಳ ಕುರಿತಂತೆ ಕ್ಷೇತ್ರಶಿಕ್ಷಣಾಧಿಕಾರಿಗಳು ಕೋರಿಕೆ ಅಭ್ಯರ್ಥಿಗಳಿಂದ / ಪರಸ್ಪರ ಅಭ್ಯರ್ಥಿಗಳಿಂದ ಪಡೆದ ಆದ್ಯತೆಯ ಮೂಲ ಪ್ರಮಾಣ ಪತ್ರಗಳ ಆಧಾರದ ದೃಢೀಕೃತ ಪ್ರತಿಗಳ ಆಧಾರದಲ್ಲಿ ಆಕ್ಷೇಪಣೆಗಳನ್ನು ಸರಿಪಡಿಸಿ **ವರ್ಗಾವಣೆ ತಂತ್ರಾಂಶದಲ್ಲಿ ಅನುಮೋದಿಸಿ ಪಟ್ಟಿಯನ್ನು** ಸಂಬಂಧಿಸಿದ ಸಹನಿರ್ದೇಶಕರಿಗೆ ಆನ್-ಲೈನ್ ನಲ್ಲಿ ಸಲ್ಲಿಸಬೇಕಾದ ದಿನಾಂಕ. | 25.07.2019 | ಜಿಲ್ಲಾ ಉಪನಿರ್ದೇಶಕರು[ಆಡಳಿತ] |
| 7 | ಅಂತರ್ ಘಟಕ ವರ್ಗಾವಣೆ ಪ್ರಕರಣಗಳಲ್ಲಿ / ಪರಸ್ಪರ ವರ್ಗಾವಣೆ ಪ್ರಕರಣಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳಿಗೆ, ವಿಭಾಗೀಯ ಸಹನಿರ್ದೇಶಕರು/ ಅಪರ ಆಯುಕ್ತಾಲಯದ ಸಹ ನಿರ್ದೇಶಕರು ಮತ್ತು ನಿರ್ದೇಶಕರು, (ಪ್ರೌಢಶಿಕ್ಷಣ) ಇವರಿಗೆ ಸಲ್ಲಿಸಬೇಕಾದ ದಿನಾಂಕ **(ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.)** | ವಿಭಾಗೀಯ ಸಹನಿರ್ದೇಶಕರಿಗೆ ಘಟಕದೊಳಗಿನ ವರ್ಗಾವಣಾ ಪ್ರಕರಣಗಳು 26.07.2019<br>ನಿರ್ದೇಶಕರು [ಪ್ರೌಢಶಿಕ್ಷಣ] [ಘಟಕದ ಹೊರಗಿನ ವರ್ಗಾವಣಾ ಪ್ರಕರಣಗಳು] 26.07.2019 | ವಿಭಾಗೀಯ ಸಹನಿರ್ದೇಶಕರು/ ಜಿಲ್ಲಾ ಉಪನಿರ್ದೇಶಕರು[ಆಡಳಿತ] |
| 8 | ಪರಸ್ಪರ ವರ್ಗಾವಣೆಗಳ (ಘಟಕದ ಒಳಗೆ)**ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ**<br>(ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 26.07.2019 | ಉಪನಿರ್ದೇಶಕರು/ವಿಭಾಗೀಯ ಸಹನಿರ್ದೇಶಕರು/ ಅಪರ ಆಯುಕ್ತಾಲಯದ ಸಹ ನಿರ್ದೇಶಕರು ಮತ್ತು ನಿರ್ದೇಶಕರು, [ಪ್ರೌಢಶಿಕ್ಷಣ] |
| 9 | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಘಟಕದ ಒಳಗೆ ಪ್ರೌಢಶಾಲಾ ಸಹಶಿಕ್ಷಕರ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ **(Final list)**<br>ಖಾಲಿ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟಣೆ<br>(ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 26.07.2019 | ವಿಭಾಗೀಯ ಸಹನಿರ್ದೇಶಕರು/ ಜಿಲ್ಲಾ ಉಪನಿರ್ದೇಶಕರು[ಆಡಳಿತ] |
| 10 | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಸಂಬಂಧಿಸಿದಂತೆ (ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ **(Final list)** | 02.08.2019 | ಅಪರ ಆಯುಕ್ತಾಲಯದ ಸಹ ನಿರ್ದೇಶಕರು ಮತ್ತು ನಿರ್ದೇಶಕರು, [ಪ್ರೌಢಶಿಕ್ಷಣ] |



Scanned by CamScanner

| | | | |
|---|---|---|---|
| 11 | ಪ್ರೌಢಶಾಲಾ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗೆ ಕೌನ್ಸಲಿಂಗ್ | 05.08.2019 ರಿಂದ 08.08.2019 | ವಿಭಾಗೀಯ ಸಹನಿರ್ದೇಶಕರು |
| 12 | ಪ್ರೌಢಶಾಲಾ ದೈಹಿಕ ಶಿಕ್ಷಕರು/ವಿಶೇಷ ಶಿಕ್ಷಕರು ಘಟಕದೊಳಗಿನ ಕೋರಿಕೆ ವರ್ಗಾವಣೆಗೆ ಕೌನ್ಸಲಿಂಗ್ | 13.08.2019 ರಿಂದ 14.08.2019 | ವಿಭಾಗೀಯ ಸಹನಿರ್ದೇಶಕರು |
| 13 | ಪ್ರೌಢ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಒಳಗೆ ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್. | 16.08.2019 | ವಿಭಾಗೀಯ ಸಹನಿರ್ದೇಶಕರು |
| | ಕಡ್ಡಾಯ ವರ್ಗಾವಣೆಗಳು | | |
| 14 | ಕಡ್ಡಾಯ ವರ್ಗಾವಣೆ (ನಿಯಮ 21(4) ರಂತೆ) – ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿ ನ ಶಿಕ್ಷಕರ ಪ್ರಕರಣಗಳಲ್ಲಿ 5 ವರ್ಷದ ಅವಧಿ ಪೂರ್ಣವಾಗಿರುವ ಹಾಗೂ ಎ ವಲಯದಲ್ಲಿ ಹತ್ತು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರನ್ನು ವಲಯ 'ಎ' ದಿಂದ ವಲಯ 'ಸಿ' ಗೆ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್. ಶೇ 20ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ಘಟಕಕ್ಕೆ ಆದ್ಯತೆಯಲ್ಲಿ ವರ್ಗಾವಣೆಗೊಳಿಸುವುದು. | 19.08.2019 | ವಿಭಾಗೀಯ ಸಹನಿರ್ದೇಶಕರು / ಜಿಲ್ಲಾ ಉಪನಿರ್ದೇಶಕರು[ಆಡಳಿತ] |
| 15 | **ಕಡ್ಡಾಯ ವರ್ಗಾವಣೆ ಸೆಕ್ಷನ್3ಎ[1][2]ರಂತೆ** | | |
| | 'ಎ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು)<br>'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣೆಗಾಗಿ ಕೌನ್ಸಿಲಿಂಗ್ – ಶೇ 20ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ಘಟಕಕ್ಕೆ ಆದ್ಯತೆಯಲ್ಲಿ ವರ್ಗಾವಣೆಗೊಳಿಸುವುದು. | 21.08.2019 ರಿಂದ 22.08.2019 | ವಿಭಾಗೀಯ ಸಹನಿರ್ದೇಶಕರು/ ಜಿಲ್ಲಾ ಉಪನಿರ್ದೇಶಕರು[ಆಡಳಿತ] |
| | **ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳು** | | |
| 16 | ಪ್ರೌಢ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | 23.08.2019 ರಿಂದ 27.08.2019 | ನಿರ್ದೇಶಕರು [ಪ್ರೌಢಶಿಕ್ಷಣ] |
| 17 | ಪ್ರೌಢ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್(ದೈಹಿಕ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರು) | 29.08.2019 | ನಿರ್ದೇಶಕರು [ಪ್ರೌಢಶಿಕ್ಷಣ] |
| 18 | ಪ್ರೌಢ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗೆ ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್ | 31.08.2019 | ನಿರ್ದೇಶಕರು [ಪ್ರೌಢಶಿಕ್ಷಣ] |

**(ಡಾ॥ ಕೆ.ಜಿ.ಜಗದೀಶ,) ಭಾ.ಆ.ಸೇ.,**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.



Scanned by CamScanner

3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ಆಯುಕ್ತರು(ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ

**ಪ್ರತಿಯನ್ನು:**

1. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ.
2. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
4. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಇವರುಗಳಿಗೆ
7. ಮುಖ್ಯಸ್ಥರು, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ ಈಗಾಗಲೇ ಸಭೆಯಲ್ಲಿ ಸೂಚಿಸಿರುವಂತೆ "ತಂತ್ರಾಂಶವನ್ನು" ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
9. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
10. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
11. ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಣೆಗೆ
12. ಕಛೇರಿ ಪ್ರತಿ.



Scanned by CamScanner